| Form No.4 (Civil) Deposition Sheets (R.P.No.57) |
|---|

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ 56/2020

ಪ್ರಾ.ಸಾ. 5 ಚಾ.ಸಾ. 13

| | | |
|---|---|---|
| ಹೆಸರು | : | ಅಬ್ದುಲ್ ರಜಾಕ |
| ತಂದೆಯ ಹೆಸರು | : | ಅಬ್ದುಲ್ ಘನಿ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಫೋಟೊ ಗ್ರಾಫರ |
| ವಾಸ | : | ಗೋಗಿ (ಕೆ) |

**ಪ್ರಮಾಣ ವಚನ ಭೋಧಿಸಿದ ದಿನಾಂಕಃ 17-06-2025**
**ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ**

ನಾನು ಕಳೆದ 20-25 ವರ್ಷಗಳಿಂದ ಫೋಟೊ ಗ್ರಾಫರ ಎಂದು ಗೋಗಿಯಲ್ಲಿ ಕೆಲಸ ಮಾಡುತ್ತಿದ್ದೇನೆ.

2. ಈ ಪ್ರಕರಣದಲ್ಲಿ ನನ್ನನ್ನು ಪೊಲೀಸರು ಎಲ್ಲಿಯೂ ಕರೆದುಕೊಂಡು ಹೋಗಿ ಯಾವುದೇ ಭಾವಚಿತ್ರ ತೆಗೆಸಿಲ್ಲ. ಅದಕ್ಕೆ ಪೂರಕವಾಗಿ ನಾನು ಯಾವುದೇ ಪ್ರಮಾಣ ಪತ್ರ ನೀಡಿಲ್ಲ. ಸಾಕ್ಷಿಗೆ ಕಡತದಲ್ಲಿನ ಪ್ರಮಾಣ ಪತ್ರವನ್ನು ತೋರಿಸಿ ತಮ್ಮ ಸಹಿ ಗುರುತಿಸಿದ್ದು ಅದನ್ನು ನಿ.ಪಿ.12 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.12(ಎ) ಎಂದು ಗುರುತಿಸಲಾಯಿತು. ನಿ.ಪಿ.12 ರಲ್ಲಿರುವ ವಿಷಯಗಳು ಗೊತ್ತಿಲ್ಲ.

( ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ

ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು. )

<u>ಪಾಟೀ ಸವಾಲು ವಿಶೇಷ ಸರಕಾರಿ ಅಭಿಯೋಜಕರಿಂದ</u>

**3.** ಈ ಪ್ರಕರಣದಲ್ಲಿ ನಾನು ಪೊಲೀಸರ ಕೋರಿಕೆಯ ಮೇರೆಗೆ ಭಾವಚಿತ್ರಗಳನ್ನು ತೆಗೆದು ಸಾಕ್ಷ್ಯ ಅಧಿನಿಯಮ ಕಲಂ. 65(ಬಿ) ಅಡಿ ಈಗ ವಿವರವಾಗಿ ಓದಿ ಹೇಳಿದ ನಿ.ಪಿ.12 ರಂತೆ ಪ್ರಮಾಣ ಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ.

**4.** ನನಗೆ ಎಲ್ಲಾ ವಿಷಯಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಡಿ.ವಿ. ವಕೀಲರಿಂದ</u>

-ಇಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.

Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 56/2020

ಪ್ರಾ.ಸಾ. 6 ಚಾ.ಸಾ. 14

| | | |
|---|---|---|
| ಹೆಸರು | : | ಲವಕುಮಾರ |
| ತಂದೆಯ ಹೆಸರು | : | ಗುರುಸಿದ್ದಪ್ಪ |
| ವಯಸ್ಸು | : | 31 ವರ್ಷ |
| ಉದ್ಯೋಗ | : | ಚಾಲಕ |
| ವಾಸ | : | ಗೋಗಿ ಪೇಠ |

ಪ್ರಮಾಣ ವಚನ ಭೋಧಿಸಿದ ದಿನಾಂಕ: 17-06-2025
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ನನಗೆ ಚಾಸಾ-1, 4, 6 ರಿಂದ 9 ರವರ ಪರಿಚಯ ಇಲ್ಲ. ಆರೋಪಿಯ ಪರಿಚಯ ಇಲ್ಲ. ಈ ಪ್ರಕರಣದಲ್ಲಿ ನನಗೆ ಏನೂ ಗೊತ್ತಿರುವುದಿಲ್ಲ. ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

( ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು ಭಿನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು. )

ಪಾಟೀ ಸವಾಲು ವಿಶೇಷ ಸರಕಾರಿ ಅಭಿಯೋಜಕರಿಂದ

3. ದಿ: 21.01.2019 ರಂದು ಸಾಯಂಕಾಲ 4-45ರ ಸುಮಾರಿಗೆ ಪೊಲೀಸರು ದಾಳಿ ಮಾಡಿ ಆರೋಪಿಯ ಸರ್ವೆ ನಂ. 99ರಲ್ಲಿ ಆತನ ವಶದಿಂದ ಸುಮಾರು 2.590 ಕಿ.ಗ್ರಾಮ್ ಹಸಿ ಗಾಂಜಾ ಗಿಡಗಳನ್ನು ಒಟ್ಟು ಕಿ.ಮ. ರೂ. 600/- ವಶಪಡಿಸಿಕೊಂಡು ಅದರಲ್ಲಿ 0.195

ಗ್ರಾಮ್ ಹಸಿ ಗಾಂಜಾವನ್ನು ರಾಸಾಯನಿಕ ಪರೀಕ್ಷೆಗೆ ಪ್ರತ್ಯೇಕವಾಗಿ ಬಿಳಿ ಬಟ್ಟೆಯಲ್ಲಿ ಹಾಕಿ ಸೀಲ್ ಮಾಡಿ ಜಪ್ತಿ ಪಡಿಸಿಕೊಂಡು ನಾನು ಅವುಗಳನ್ನು ತೂಕ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅದರಂತೆ ಈಗ ನನಗೆ ಓದಿ ಹೇಳಿದ ನಿ.ಪಿ.13 ರಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

4. ನನಗೆ ಎಲ್ಲಾ ವಿಷಯಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಡಿ.ವಿ. ವಕೀಲರಿಂದ</u>

-ಇಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.

| |
|---|
| Form No.4 (Civil)<br>Deposition<br>Sheets<br>(R.P.No.57) |

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 56/2020

ಫ್ರಾ.ಸಾ. 7 ಚಾ.ಸಾ. 15

| | | |
|---|---|---|
| ಹೆಸರು | : | ಡಾಃ ಸಂಜಯ |
| ತಂದೆಯ ಹೆಸರು | : | ಗೌಡಪ್ಪ ಸಂಗಾವಿ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ವೈದ್ಯಾಧಿಕಾರಿಗಳು ತಾಲೂಕ ಆಸ್ಪತ್ರೆ ಬಸವನಬಾಗ್ಯವಾಡಿ |
| ವಾಸ | : | ಬಸವನ ಬಾಗ್ಯವಾಡಿ |

ವಿ.ಸಿ.ಯ ಮುಖಾಂತರ ಪ್ರಮಾಣ ವಚನ ಭೋಧಿಸಿದ ದಿನಾಂಕಃ 17-06-2025
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ನಾನು 2015 ರಿಂದ 2019ರ ವರೆಗೆ ವನದುರ್ಗಾ ಫ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ನನಗೆ ಚಾಸಾ-1 ರಿಂದ 9 ರವರ ಪರಿಚಯ ಇದೆ. ಆರೋಪಿಯ ಪರಿಚಯ ಇದೆ. ದಿನಾಂಕಃ 21-01-2019 ರಂದು ಮಧ್ಯಾಹ್ನ 3-00 ಗಂಟೆ ಸಮಯದಲ್ಲಿ ಕರ್ತವ್ಯದಲ್ಲಿದ್ದಾಗ ಗೋಗಿ ಪೊಲೀಸಠಾಣೆಯಿಂದ ದೂರವಾಣಿ ಕರೆ ಬಂದಿದ್ದು ಈ ಪ್ರಕರಣದಲ್ಲಿ ದಾಳಿಯ ಸಮಯದಲ್ಲಿ ಪತ್ರಾಂಕಿತ ಅಧಿಕಾರಿಯಾಗಿ ಹಾಜರಿದ್ದು ತನಿಖೆಗೆ ಸಹಕರಿಸಬೇಕೆಂದು ಕೋರಿದ್ದು ಅದಕ್ಕೆ ನಾನು ಒಪ್ಪಿಕೊಂಡಿದ್ದು ಅದರಂತೆ ಕೂಡಲೇ ನಮ್ಮ ಕಛೇರಿಯಿಂದ ಹೊರಟು ಹಾರಣಗೇರಾ ಹಳ್ಳದ ಸಮೀಪ ಒಂದು ಹೊಲಕ್ಕೆ ಹೋಗಿದ್ದು ಅಲ್ಲಿ ಗಾಂಜಾಗಿಡಗಳನ್ನು ತೋರಿಸಿ ಕಿತ್ತಿದಿದ್ದರು ನಮ್ಮ ಜೊತೆ ತೂಕಮಾಡುವ ವ್ಯಕ್ತಿ ಸಹ ಬಂದಿದ್ದು ನಂತರ ಆ ಗಿಡಗಳನ್ನು ತೂಕ ಮಾಡಿದಾಗ ಒಂದು ಗಿಡ 2 ಕೆ.ಜಿ. 590 ಗ್ರಾಮ್ ತೂಕ ಆಯಿತು. ಚಾಸಾ-2 ಮತ್ತು 3 ರವರು ಶಾಲೆಯ ಮುಂದೆ ಇದ್ದ ಅಂಗಡಿಯವರು ತೂಕ ಮಾಡಿದರು. ದಾಳಿ ಮಾಡಿದಾಗ ಸಂಜೆ 4-45 ಗಂಟೆಯಾಗಿತ್ತು. ಆಪೈಕಿ ಪೊಲೀಸರು ಸ್ವಲ್ಪ ಗಾಂಜಾ ತೆಗೆದು ಬಟ್ಟೆಯಲ್ಲಿ ಸುತ್ತಿ ಲ್ಯಾಬಗೆ ಕಳುಹಿಸಬೇಕು ಎಂದು ತೆಗೆದು ಸೀಲ್ ಮಾಡಿದರು. ಪಂಚನಾಮೆಯನ್ನು 4-45 ರಿಂದ

5-45 ಗಂಟೆಯವರೆಗೆ ಮಾಡಿದರು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಮು.ಮಾ.1ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಪಂಚನಾಮೆಯಲ್ಲಿ ಸಾಕ್ಷಿ ಸಹಿ ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.5(ಸಿ) ಎಂದು ಗುರುತಿಸಲಾಯಿತು. ನಿ.ಪಿ.6 ರಿಂದ 10 ಭಾವಚಿತ್ರಗಳಲ್ಲಿ ತಾನು ಇರುವದಾಗಿ ನೋಡಿ ಗುರುತಿಸುತ್ತಾರೆ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಡಿ.ವಿ. ವಕೀಲರಿಂದ</u>

4. ಆರೋಪಿ ದೈಹಿಕ ವಿಶೇಷ ಚೆತನನಿರುತ್ತಾನೆ ಎಂದರೆ ಸರಿ. ಆತ ಕೃಷಿ ಮಾಡಲು ಯೋಗ್ಯನಲ್ಲ ಎಂದರೆ ಸರಿಯಲ್ಲ. ಆರೋಪಿಯ ಬಳಿ ಎಷ್ಟು ಗಿಡಗಳು ಇದ್ದವು ಎಂದು ನೋಡಿಲ್ಲ. ಗಿಡಗಳನ್ನು ಕಿತ್ತ ಜಾಗದಲ್ಲಿ ಪಂಚನಾಮೆಯನ್ನು ಮಾಡಿಲ್ಲ. ಈ ಪ್ರಕರಣದಲ್ಲಿನ ಹೊಲ ಹಾರಣಗೇರಾ ಗ್ರಾಮದ ಯಾವ ದಿಕ್ಕಿಗೆ ಇದೆ ಎಂದು ಹೇಳಲು ಬರುವುದಿಲ್ಲ. ಸದರಿ ಹೊಲದ ಯಾವ ದಿಕ್ಕಿನಲ್ಲಿ ಪಂಚನಾಮೆ ಮಾಡಿರುತ್ತಾರೆ ಎಂದು ಹೇಳಲು ಬರುವುದಿಲ್ಲ. ಸದರಿ ಹೊಲದಲ್ಲಿ ಹತ್ತಿ ಬೆಳೆಯ ಯಾವ ಯಾವ ಬಾಗಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ಅದರಂತೆ ಗಾಂಜಾ ಗಿಡದ ಯಾವ ಯಾವ ಬಾಗಗಳು ಇದ್ದವು ಎಂದರೆ ಬೇರು, ಎಲೆಗಳು, ಖಾಂಡಾ ಇದ್ದವು. ಸದರಿ ಹೊಲದ ಅಕ್ಕ ಪಕ್ಕ ಜನರು ಯಾರು ಇರಲಿಲ್ಲ. ಮಾದರಿಗಾಗಿ ಗಿಡದ ಯಾವ ಬಾಗದಿಂದ ಶೇಖರಿಸಲಾಗಿದೆ ಎಂದು ಹೇಳಲು ಬರುವುದಿಲ್ಲ. ಮಧ್ಯಾಹ್ನ 1-30 ಗಂಟೆಗೆ ನಾನು ವನದುರ್ಗಾದಲ್ಲಿ ಇದ್ದಾಗ ಪಿಎಸಐ ಅವರು ನನಗೆ ಫೋನ್ ಮುಖಾಂತರ ತಿಳಿಸಿದರು ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ.

5. ದಿನಾಂಕಃ 21-01-2019 ರಂದು ಮಧ್ಯಾಹ್ನ 3-00 ಗಂಟೆ ಸಮಯದಲ್ಲಿ ಕರ್ತವ್ಯದಲ್ಲಿದ್ದಾಗ ಗೋಗಿ ಪೊಲೀಸಠಾಣೆಯಿಂದ ದೂರವಾಣಿ ಕರೆ ಬಂದಿದ್ದು ಈ ಪ್ರಕರಣದಲ್ಲಿ ದಾಳಿಯ ಸಮಯದಲ್ಲಿ ಪತ್ರಾಂಕಿತ ಅಧಿಕಾರಿಯಾಗಿ ಹಾಜರಿದ್ದು ತನಿಖೆಗೆ ಸಹಕರಿಸಬೇಕೆಂದು ಕೋರಿದ್ದು ಅದಕ್ಕೆ ನಾನು ಒಪ್ಪಿಕೊಂಡಿದ್ದು ಅದರಂತೆ ಕೂಡಲೇ ನಮ್ಮ ಕಛೇರಿಯಿಂದ ಹೊರಟು ಹಾರಣಗೇರಾ ಹಳ್ಳದ ಸಮೀಪ ಒಂದು ಹೊಲಕ್ಕೆ ಹೋಗಿದ್ದು ಅಲ್ಲಿ ಗಾಂಜಾಗಿಡಗಳನ್ನು ತೋರಿಸಿ ಕಿತ್ತಿದಿದ್ದರು ನಮ್ಮ ಜೊತೆ ತೂಕಮಾಡುವ ವ್ಯಕ್ತಿ ಸಹ ಬಂದಿದ್ದು ನಂತರ ಆ ಗಿಡಗಳನ್ನು ತೂಕ ಮಾಡಿದಾಗ ಒಂದು ಗಿಡ 2 ಕೆ.ಜಿ. 590 ಗ್ರಾಮ್ ತೂಕ ಆಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-2 ಮತ್ತು 3 ರವರು ಶಾಲೆಯ ಮುಂದೆ ಇದ್ದ ಅಂಗಡಿಯವರು ತೂಕ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾಳಿ ಮಾಡಿದಾಗ ಸಂಜೆ 4-45 ಗಂಟೆಯಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಪ್ಕೆಕಿ ಪೊಲೀಸರು ಸ್ವಲ್ಪ ಗಾಂಜಾ ತೆಗೆದು ಬಟ್ಟೆಯಲ್ಲಿ ಸುತ್ತಿ

ಲ್ಯಾಬಗೆ ಕಳುಹಿಸಬೇಕು ಎಂದು ತೆಗೆದು ಸೀಲ್ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು **4-45** ರಿಂದ **5-45** ಗಂಟೆಯವರೆಗೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.